## ಬೀದರ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದೋದ್ದೇಶ ಸಹಕಾರ ಸಂಘ, ಜಿಲ್ಲಾಧಿಕಾರಿಗಳ ಕಛೇರಿ, ಬೀದರ

ಸಂ/ಬೀಜಿಕಾಸೇವಿಸಸಂ/ಸಿಆರ್೦೮ /2024-25 ದಿನಾಂಕ:25-11-2024

ಇವರಿಗೆ,
ಮಾನ್ಯ ಸಹಾಯಕ ನಿರ್ದೇಶಕರು,
ವಾರ್ತಾ ಮತ್ತು ಪ್ರಚಾರ ಇಲಾಖೆ,
ಬೀದರ,

ಮಾನ್ಯರೆ,

**::ಉಚಿತ ಪತ್ರಿಕಾ ಪ್ರಕಟಣೆಗಾಗಿ::**

ವಿಷಯ: ಚಾಲಕ ಮತ್ತು ತಾಂತ್ರಿಕ ಸಹಾಯಕ ಸಿಬ್ಬಂದಿಗಳನ್ನು ತಾತ್ಕಾಲಿಕವಾಗಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವ ಬಗ್ಗೆ.

* * *

ಬೀದರ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದ್ದೋಶ ಸಹಕಾರ ಸಂಘ ನಿಯಮಿತ, ಜಿಲ್ಲಾಧಿಕಾರಿಗಳ ಕಛೇರಿ, ಬೀದರ. ರವರ ಮೂಲಕ ಹೊರಗುತ್ತಿಗೆಯ ಮೇಲೆ ನಿಯೋಜಿಸಿಕೊಳ್ಳಲು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಬೀದರ ವಿಭಾಗದ ವ್ಯಾಪ್ತಿಯ ಬೀದರ-1, ಬೀದರ-2, ಭಾಲ್ಕಿ, ಔರಾದ, ಬಸವಕಲ್ಯಾಣ ಮತ್ತು ಹುಮನಾಬಾದ ಘಟಕಗಳ ಬಸ್ ಚಾಲನೆಗೆ 100 ಜನ ಚಾಲಕರು ಹಾಗೂ ವಾಹನಗಳ ನಿರ್ವಹಣೆಗೆ 50 ಜನ ತಾಂತ್ರಿಕ ಸಹಾಯಕರು ಬೇಕಿರುವದರಿಂದ ಅರ್ಹ ಅಭ್ಯರ್ಥಿಗಳ ಆಯ್ಕೆಗಾಗಿ Walk in Interview ಅನ್ನು ಏರ್ಪಡಿಸಲಾಗಿದೆ.

ಕಾರಣ ದಿನಾಂಕ 02.12.2024 ರಿಂದ 04.12.2024ರ ವರೆಗೆ ಚಾಲಕ ಹುದ್ದೆಗೆ ಹಾಗೂ 06.12.2024 ರಿಂದ 07.12.2024ರ ವರೆಗೆ ತಾಂತ್ರಿಕ ಸಹಾಯಕ ಹುದ್ದೆಗೆ ಕಕರಸಾ ನಿಗಮದ ಹಳೆ ಬಸ್ ನಿಲ್ದಾಣದ ಬೀದರ ವಿಭಾಗೀಯ ಕಛೇರಿಯ ಕಛೇರಿ ಸಮಯದಲ್ಲಿ ನೇರ ಸಂದರ್ಶನ ನಡೆಸಲಾಗುತ್ತದೆ. ಆಯ್ಕೆ ಸಮೀತಿ ಸಮ್ಮುಖದಲ್ಲಿ ಸಂದರ್ಶನಕ್ಕೆ ಸ್ವಂತ ಖರ್ಚಿನಲ್ಲಿ ಹಾಜರಾಗತಕ್ಕದ್ದು, ಅಭ್ಯರ್ಥಿಗಳು ಹಾಜರು ಪಡಿಸಬೇಕಾದ ದಾಖಲಾತಿಗಳು ಮತ್ತು ಅನುಸರಿಸಬೇಕಾದ ಷರತ್ತು ನಿಬಂಧನೆಗಳ ಹಾಗೂ ಹೆಚ್ಚಿನ ವಿವರಗಳಿಗಾಗಿ ಸರಕಾರದ ವೆಬ್ ಸೈಟ್ www.bidar.nic.inನ್ನು ಸಂಪರ್ಕಿಸಬಹುದಾಗಿದೆ.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

**ಕಾರ್ಯದರ್ಶಿಗಳು,**
ಬೀದರ ಜಿಲ್ಲಾ ಕಾರ್ಮಿಕ ಸೇವೆಗಳ ವಿವಿದ್ದೋಶ
ಸಹಕಾರ ಸಂಘ ನಿಯಮಿತ,
ಜಿಲ್ಲಾಧಿಕಾರಿಗಳ ಕಛೇರಿ, ಬೀದರ.

**ಕಛೇರಿ ಟಿಪ್ಪಣಿ ಮಾನ್ಯ ಜಿಲ್ಲಾಧಿಕಾರಿಗಳಿಂದ ಅನುಮೋದಿಸಲ್ಪಟ್ಟಿದೆ..**

ಪ್ರತಿಯನ್ನು: ಮಾನ್ಯ ಜಿಲ್ಲಾ nic ಅಧಿಕಾರಿಗಳು, ಜಿಲ್ಲಾಧಿಕಾರಿಗಳ ಕಛೇರಿ, ಬೀದರರವರ ದಯಾಪರ ಮಾಹಿತಿಗಾಗಿ ಸದರಿ ವಿಷಯವನ್ನುwebsite ನಲ್ಲಿ ಅಪಲೋಡ್ ಮಾಡಲು ಕೋರಿದೆ.

## ಹಾಜರು ಪಡಿಸಬೇಕಾದ ಮೂಲ ದಾಖಲಾತಿಗಳು:

### I. ಚಾಲಕ ಹುದ್ದೆಗೆ:

1) ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿ
2) Must be in position of two years HTV licence to drive heavy passenger/goods vehicle and possess Karnataka Badge.
3) ನಿಗದಿತ ದೇಹದಾರ್ಢ್ಯತೆ ಹೊಂದಿರಬೇಕು (ಕನಿಷ್ಠ, ಪುರುಷ: ಎತ್ತರ- 163 cm ತೂಕ: 55 kg ಮಹಿಳೆ: ಎತ್ತರ- 153 cm ತೂಕ: 50 kg)
4) ಕಕರಸಾ ನಿಗಮದಲ್ಲಿ ಅಥವಾ ಸಹೋದರ ಸಂಸ್ಥೆಗಳಾದ ಕರಾರಸಾ ನಿಗಮ/ ಬೆಮಸಾ ಸಂಸ್ಥೆ/ ವಾಕರಸಾ ಸಂಸ್ಥೆಗಳಲ್ಲಿ ಗಣಕೀಕೃತ ಚಾಲನಾ ಪಥದ ಟ್ರ್ಯಾಕ್ ಟೆಸ್ಟನಲ್ಲಿ ಭಾಗವಹಿಸಿ, ಉತ್ತೀರ್ಣರಾದ ಕುರಿತು ಅಂಕಪಟ್ಟಿ ಹಾಗೂ ದಾಖಲಾತಿ ಪರಿಶೀಲನಾ ವರದಿ.
5) ಆಧಾರ ಕಾರ್ಡ
6) ಜಾತಿ ಪ್ರಮಾಣ ಪತ್ರ
7) ಗ್ರಾಮೀಣ ಮತ್ತು ಕನ್ನಡ ಮಾಧ್ಯಮ ಹಾಗೂ ಯೋಜನಾ ನಿರಾಶ್ರಿತರ ಪ್ರಮಾಣ ಪತ್ರ
8) ಇತ್ತೀಚಿನ ಪಾಸಪೋರ್ಟ ಅಳತೆಯ 4 ಭಾವಚಿತ್ರಗಳು.
9) ಅಭ್ಯರ್ಥಿಯ ವಯಸ್ಸು ದಿನಾಂಕ 04.12.2024 ಕನಿಷ್ಠ 24 ವರ್ಷ ತುಂಬಿರಬೇಕು ಮತ್ತು ಈ ಕೆಳಗಿನಂತೆ ಗರಿಷ್ಠ ವಯೋಮಿತಿ ಮೀರಿರಬಾರದು.
   ಸಾಮಾನ್ಯ ವರ್ಗ: 35 ವರ್ಷ, ಪ್ರವರ್ಗ 2A, 2B, 3A & 3B: 38 ವರ್ಷ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1: 40 ವರ್ಷ.

### II. ತಾಂತ್ರಿಕ ಸಹಾಯಕ ಹುದ್ದೆಗೆ ಹಾಜರು ಪಡಿಸಬೇಕಾದ ಮೂಲ ದಾಖಲಾತಿಗಳು:

1) ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿ
2) ಐ.ಟಿ.ಐ. / ಐ.ಟಿ.ಸಿ / ಎನ್.ಎ.ಸಿ. Pass in ITC/ITI/NAC in Mechanic (Motor vehicle) / Diesel Mechanic / Auto Electrician / Welder / Sheet Metal worker / Electronic Mechanic / upholstery Draftsman (Mechanic) / Fitter Machinist / Tyre fittring / Vulcanizing / Painging / Refrigeration and Air Conditioning / Turner / Automobile / Electrical / Electronics / Fabrication (Fitter & wekdubg ) from an institution recognized by the technical board / or the Government after passed in SSLC from the Secondry board of Education ಮೂಲ ಅಂಕಪಟ್ಟಿ
3) ನಿಗದಿತ ದೇಹದಾರ್ಢ್ಯತೆ ಹೊಂದಿರಬೇಕು (ಕನಿಷ್ಠ, ಪುರುಷ: ಎತ್ತರ- 163 cm ತೂಕ: 55 kg ಮಹಿಳೆ: ಎತ್ತರ- 153 cm ತೂಕ: 50 kg)
4) ಆಧಾರ ಕಾರ್ಡ
5) ಜಾತಿ ಪ್ರಮಾಣ ಪತ್ರ
6) ಗ್ರಾಮೀಣ ಮತ್ತು ಕನ್ನಡ ಮಾಧ್ಯಮ ಹಾಗೂ ಯೋಜನಾ ನಿರಾಶ್ರಿತರ ಪ್ರಮಾಣ ಪತ್ರ
7) ಇತ್ತೀಚಿನ ಪಾಸಪೋರ್ಟ ಅಳತೆಯ (4) ಭಾವಚಿತ್ರಗಳು.
8) ಅಭ್ಯರ್ಥಿಯ ವಯಸ್ಸು ದಿನಾಂಕ 07.12.2024 ರಂದು ಕನಿಷ್ಠ 18 ವರ್ಷ ತುಂಬಿರಬೇಕು ಮತ್ತು ಈ ಕೆಳಗಿನಂತೆ ಗರಿಷ್ಠ ವಯೋಮಿತಿ ಮೀರಿರಬಾರದು.
   ಸಾಮಾನ್ಯ ವರ್ಗ: 35 ವರ್ಷ, ಪ್ರವರ್ಗ 2A, 2B, 3A & 3B: 38 ವರ್ಷ ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ-1: 40 ವರ್ಷ.

ಚಾಲಕ ಮತ್ತು ತಾಂತ್ರಿಕ ಸಹಾಯಕ ಹುದ್ದೆಗಳ ಖಾಲಿ ಸ್ಥಾನಗಳ ವಿವರಗಳು:

| ಕ್ರ.ಸ | ಘಟಕ | ಚಾಲಕ | ತಾಂತ್ರಿಕ ಸಹಾಯಕ |
|---|---|---|---|
| 1 | ಬೀದರ 1 | 20 | 15 |
| 2 | ಬೀದರ 2 | 20 | - |
| 3 | ಹುಮನಾಬಾದ | 10 | - |
| 4 | ಬಸವಕಲ್ಯಾಣ | 20 | - |
| 5 | ಭಾಲ್ಕಿ | 20 | 15 |
| 6 | ಔರಾದ | 10 | 20 |
| | **ಒಟ್ಟು** | **100** | **50** |

Malegaon
SECRETARY
Bidar District Services of Labour Multipurpose Co-operative Society
D.C. Office BIDAR

III. **ಇತರೆ ಷರತ್ತುಗಳು** :

1) ಬೀದರ ವಿಭಾಗದ ಬೀದರ-1, ಬೀದರ-2, ಭಾಲ್ಕಿ, ಬಸವಕಲ್ಯಾಣ, ಔರಾದ ಮತ್ತು ಹುಮನಾಬಾದ ಘಟಕಗಳ ಪೈಕಿ ಯಾವುದೇ ಘಟಕದಲ್ಲಿ ಕರ್ತವ್ಯ ನಿರ್ವಹಿಸಲು ಸಿದ್ಧರಿರಬೇಕು.
2) ಚಾಲಕ ಹುದ್ದೆಗೆ ಮಾಸಿಕ ವೇತನ ₹.16973-00 ಹಾಗೂ ತಾಂತ್ರಿಕ ಸಹಾಯಕ ಹುದ್ದೆಗೆ ₹.16550-00 ನಿಗದಿ ಪಡಿಸಲಾಗಿದೆ. ಕರ್ತವ್ಯಕ್ಕೆ ಗೈರು ಹಾಜರಾದಲ್ಲಿ ತತ್ಸಮಾನವಾಗಿ ವೇತನವನ್ನು ಕಡಿಕಗೊಳಿಸಲಾಗವುದು.
3) ಚಾಲಕ ಹುದ್ದೆಗಾಗಿ 2020 ನೇ ಸಾಲಿನಿಂದ ಈಚೆಗೆ ಚಾಲನಾಪಥದ ಟ್ರೇಡ್ ಟೆಸ್ಟನಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಆಯ್ಕೆಯಲ್ಲಿ ಮೊದಲ ಆದ್ಯತೆ ನೀಡಲಾಗುವುದು.
4) ಸದರಿ ಹೊರಗುತ್ತಿಗೆಯ ನಿಯೋಜನೆಯು ಆರು (6) ತಿಂಗಳ ಅವಧಿಗೆ ಮಾತ್ರ ಇರುತ್ತದೆ. ಅವಶ್ಯಕವೆನಿಸಿದಲ್ಲಿ ಅವಧಿಯನ್ನು ವಿಸ್ತರಿಸಲು ಕ್ರಮ ಜರುಗಿಸಲಾಗುವುದು.
5) ಯಾವುದೇ ವಿಷಯದ ಕುರಿತು ಗೊಂದಲ ಉಂಟಾದಲ್ಲಿ ನಿಗಮದ ನಿರ್ಣಯವೇ ಅಂತಿಮವಾಗಿರುತ್ತದೆ.
6) ಸಂದರ್ಶನಕ್ಕೆ ಗೊತ್ತು ಪಡಿಸಿದ ದಿನಾಂಕಗಳಂದು ಸಂದರ್ಶನಕ್ಕ ಹಾಜರಾಗುವ ಅಭ್ಯರ್ಥಿಗಳು ಆಯಾ ದಿನ ಮುಂಜಾನೆ 12.00 ಗಂಟೆಯ ಒಳಗಾಗಿ ಕಕರಸಾ ನಿಗಮದ ವಿಭಾಗೀಯ ಕಛೇರಿ ಬೀದರನಲ್ಲಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳತಕ್ಕದ್ದು. ನಂತರದಲ್ಲಿ ಹಾಜರಾಗುವ ಅಭ್ಯರ್ಥಿಗಳ ಹೆಸರುಗಳನ್ನು ನೊಂದಾಯಿಸಿಕೊಳ್ಳಲಾಗುವುದಿಲ್ಲ. ಮುಂಚಿತವಾಗಿ ಹೆಸರುಗಳನ್ನು ನೊಂದಾಯಿಸಿಕೊಂಡವರಿಗೆ ಮಾತ್ರ ಸಂದರ್ಶನಕ್ಕೆ ಹಾಜರಾಗಲು ಅವಕಾಶವಿರುತ್ತದೆ.
7) ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳು ಸಂದರ್ಶನದ ಸಮಯದಲ್ಲಿ ನಿಮ್ಮ ದಾಖಲಾತಿಗಳ ಎರಡು (2) ಸೆಟ್ ಛಾಯಾ ಪ್ರತಿಗಳನ್ನು ಒದಗಿಸುವುದು.
8) ಈ ನೇಮಕಾತಿಯು ತಾತ್ಕಾಲಿಕವಾಗಿದ್ದು ಮೆರಿಟ್ ಆಧಾರದ ಮೇಲೆ ಪಾರದರ್ಶಕವಾಗಿ ಪ್ರಚಲಿತ ನಿಯಮಾವಳಿಯಂತೆ ಆಯ್ಕೆ ಪಟ್ಟಿ ಸಿದ್ಧಪಡಿಸಲಾಗುವದು. ಕಾರಣ ಯಾವುದೇ ಆಮೀಷಕ್ಕೆ ಒಳಗಾಗಬಾರದೆಂದು ತಿಳಿಸಲಾಗಿದೆ.
9) ಈ ಆಯ್ಕೆಯು ಯಾವುದೇ ಖಾಯಂ ಹುದ್ದೆಗಾಗಿ ಎಂದು ಭಾವಿಸತಕ್ಕದಲ್ಲ.

Malegaon

SECRETARY
Bidar District Services of Lau.
Multipurpose Co-operative Society
DC Office BIDAR